ಇಂದು ದಿಃ 19.11.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಶ್ರೀ.ಪಿ ಎಂ ಆರ್ ವಕೀಲರಿಂದ 9 ನೇ ಪ್ರತಿವಾದಿಗಳ ಪರವಾಗಿ.</u>**

ವಾದಪತ್ರವನ್ನು ತಯಾರಿಸಲು ಮೃತ 1 ನೇ ವಾದಿ ಮಾತ್ರ ವಕೀಲರಿಗೆ ಮಾಹಿತಿ ಕೊಟ್ಟದ್ದು ಎಂದು ಹೇಳುವುದು ಸರಿಯಲ್ಲ. ವಾದಪತ್ರದಲ್ಲಿ ಏನೆಲ್ಲ ಬರೆಯಲಾಗಿದೆ ಎಂಬುದು ನನಗೆ ಗೊತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ನನ್ನ ಜನ್ಮ ದಿನಾಂಕ 03.03.1950. ಮಾಧವರಾವರವರು ನನ್ನ ತಂದೆಯ ಅಣ್ಣ. ಅವರಿಗೆ 5 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು. ಅವರು 1947 ರಲ್ಲಿ ತೀರಿಹೋದರು. ಶಂಕರರಾವ ರೇಗೆರವರಿಗೆ 6 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು. ವಾದಪತ್ರದೊಂದಿಗೆ ಲಗತ್ತಿಸಿದ ವಂಶಾವಳಿಯಲ್ಲಿ ಸದರಿ ಹೆಣ್ಣು ಮಗಳನ್ನು ತೋರಿಸಿರುವುದಿಲ್ಲ . ಮಾಧವರಾವರವರು ತೊರಗಲ್ ನಿಂದ ಧಾರವಾಡಕ್ಕೆ ಬಂದಾಗ ಅವರಿಗೆ ಯಾವುದೆ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ. ಧಾರವಾಡದಲ್ಲಿ ಮಾರುತಿ ಮೊಟರ್ ಸರ್ವಿಸ್ ಎಂಬ ಪ್ರಮುಖ ಮೊಟರ್ ಸರ್ವಿಸ್ ಸಂಸ್ಥೆ ಇತ್ತು. ಅದರಲ್ಲಿ 20 ಬಸ್ಸುಗಳು ಸರಕು ಸಾಗಾಟ ಮಾಡಲು ಇದ್ದವು ಎಂಬುದು ನನಗೆ ಗೊತ್ತಿಲ್ಲ.

ಸದರಿ ಮಾರುತಿ ಮೊಟರ್ ಸರ್ವಿಸ್ ಧಾರವಾಡದಲ್ಲಿ ಒಳ್ಳೆಯ ಹೆಸರು ಮತ್ತು ಹಣ ಗಳಿಸಿತ್ತು ಎಂಬುದು ನನಗೆ ಗೊತ್ತಿಲ್ಲ. ವಾದಪತ್ರದೊಂದಿಗೆ ಲಗತ್ತಿಸಿದ ಅನೆಕ್ಸರ್ ಬಿ ಸ್ವತ್ತುಗಳನ್ನು ಸದರಿ ಮಾರುತಿ ಮೊಟರ್ ಸರ್ವಿಸ್ ನ ಆದಾಯದಿಂದ ಗಳಿಸಿದ್ದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ಆದಾಯದಿಂದ ಹಾಗೂ ಮಾಧವರಾವರವರು ಮಾಡುತ್ತಿದ್ದ ಬೇರೆ ಬ್ಯುಸಿನೆಸ್ ನ ಆದಾಯದಿಂದ ಸಹ ಖರೀದಿಸಿದ್ದು ಎಂದು ಉತ್ತರಿಸಿದ್ದಾರೆ. ಮಾಧವರಾವರವರು ಬೇರೆ ಯಾವ ಬ್ಯುಸಿನೆಸ್ ಮಾಡುತ್ತಿದ್ದರು ಎಂದು ವಾದಪತ್ರದಲ್ಲಿ ಕಾಣಿಸಿರುವುದಿಲ್ಲ. 1947ರಲ್ಲಿ ಸದರಿ ಮಾರುತಿ ಮೊಟರ್ ಸರ್ವಿಸ್ ನ್ಯಾಷನಲೈಸ್ಡ ಆಯಿತು. ಆ ಸಮಯದಲ್ಲಿ ಮಾರುತಿ ಮೊಟರ್ ಸರ್ವಿಸ್ ಹಣ , ಬಂಗಾರ, ಬೆಳ್ಳಿ ಮತ್ತು ಎಫ್.ಡಿ. ಗಳನ್ನು ಗಳಿಸಿತ್ತು. 1955ರಲ್ಲಿ ರೇಗೆ ಬ್ರದರ್ಸ ಜನರಲ್ ಮರ್ಚಂಟ್ಸ ಎಂಬ ಸಂಸ್ಥೆ ಪ್ರಾರಂಭವಾಯಿತು.ಅದು ಧಾರವಾಡದಲ್ಲಿ ಒಳ್ಳೆಯ ಅಂಗಡಿ ಎಂದು ಹೆಸರು ಗಳಿಸಿತ್ತು. 1961ರಲ್ಲಿ ಧಾರವಾಡದಲ್ಲಿ ರೇಗೆ ಅಟೋಸರ್ವಿಸ್ ನ್ನು ಪ್ರಾರಂಬಿಸಲಾಯಿತು. ಅದು ಸಹ ಧಾರವಾಡದಲ್ಲಿ ಒಳ್ಳೆಯ ಹೆಸರವನ್ನು ಗಳಿಸಿತ್ತು. ಅದರಿಂದಲೂ ಸಹ ಸಾಕಷ್ಟು ಆದಾಯ ಬಂದಿತ್ತು ಎಂಬುದು ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಎಲ್ಲ ಸಂಸ್ಥೆಗಳ ಆದಾಯದಿಂದ ಕುಟುಂಬದ ಎಲ್ಲ ವೆಚ್ಚಗಳನ್ನು ನೋಡಿಕೊಳ್ಳಲಾಗುತ್ತಿತ್ತು. ಶಂಕರರಾವರವರು ಸಹ ಮೇಲೆ ಹೇಳಿದ ಎಲ್ಲ ವ್ಯವಹಾರಗಳನ್ನು ಮಾಡಿ ತಮ್ಮ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು. ಮಾಧವರಾವ ಮತ್ತು ಶಂಕರರಾವರವರು ಸೇರಿ ಮೇಲೆ ಹೇಳಿದ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ಮಾಧವರಾವರವರು ಮಾತ್ರ ಸದರಿ ಎಲ್ಲ ವ್ಯವಹಾರಗಳನ್ನು ನೋಡುತ್ತಿದ್ದರು ಹಾಗೂ ಶಂಕರರಾವರವರು ಅವುಗಳ ಮೇಲ್ವಿಚಾರಣೆ ಮಾತ್ರ ನೋಡಿಕೊಳ್ಳುತ್ತಿದ್ದರು ಎಂದು ಹೇಳುವುದು ಸರಿಯಲ್ಲ. ಮಾರುತಿ ಮೊಟರ ಸರ್ವಿಸ್ ಮಾಧವರಾವರವರ ಸ್ವಂತ ಪ್ರೊಪ್ರೈಟರಿ ಕನ್ಸರ್ನ ಆಗಿತ್ತು ಎಂದು ಹೇಳುವುದು ಸರಿಯಲ್ಲ. ನನಗೆ ಕನ್ನಡ ಭಾಷ್ಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಈಗ ನನಗೆ ತೋರಿಸಿದ ದಾಖಲೆ ಕನ್ನಡ ಭಾಷ್ಷೆಯಲ್ಲಿದ್ದು ಅದರಲ್ಲಿ ನನಗೆ ಓದಿ ಹೇಳಿದ ಮೇರೆಗೆ ಮಾಧವರಾವ ರೇಗೆ

ರವರು ಮಾರುತಿ ಮೋಟರ ಸರ್ವಿಸ್ , ಧಾರವಾಡರ ಪ್ರೋಪ್ರೈಟರ್ ಎಂದು ಕಾಣಿಸಿರುವುದು ಕಂಡುಬರುತ್ತಿದೆ . ಸಾಕ್ಷಿಗೆ ತೋರಿಸಿ ಓದಿ ಹೇಳಿದ ದಾಖಲೆ ಪಾಪ್ಲೇಟ್ ಆಗಿದ್ದು , ಓದಿ ಹೇಳಿದ ಸಂಗತಿಯನ್ನು ಸಾಕ್ಷಿಯು ಹೌದು ಎಂದು ಹೇಳಿದ ಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಾಲ್ಕು ಕೆನರಾ ಬ್ಯಾಂಕ ಲಿಮಿಟೆಡ್ , ಧಾರವಾಡ ಪಾಸ್ ಪುಸ್ತಕಗಳಲ್ಲಿ ಮಿಸ್ಟರ್ ಮಾಧವರಾವ ವಿ ರೇಗೆ , ಮಾರುತಿ ಮೋಟರ ಸರ್ವಿಸ್ ಎಂದು ಕಾಣಿಸಲಾಗಿದೆ. ಸದರಿ ದಾಖಲೆಗಳನ್ನು ಸಾಕ್ಷಿ ಗುರುತಿಸಿದ ಕಾರಣ ಅವುಗಳನ್ನು ನಿಡಿ-2, 3, 4 ಮತ್ತು ನಿಡಿ-5 ಎಂದು ಗುರುತಿಸಲಾಯಿತು. ಮಾಧವರಾವರವರು ತಾವು ಗಳಿಸಿದ ಹಣದಿಂದ ವಾದಪತ್ರದ ಅನೆಕ್ಸರ್ ಬಿ ಶೆಡ್ಯೂಲ್ ಸ್ವತ್ತುಗಳನ್ನು ಸಂಪಾದಿಸಿದ್ದು ಎಂದು ಹೇಳುವುದು ಸರಿಯಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಮಾಧವರಾವ ರೇಗೆರವರು ಧಾರವಾಡ ಹುಬ್ಬಳ್ಳಿ ಲೋಕಲ್ ಮೋಟರ ಸರ್ವಿಸ್ ಯುನಿಯನ್ , ಧಾರವಾಡರವರಿಂದ ಪ್ಲಾಟ ನಂ.6 ಸ್ವತ್ತನ್ನು ಖರೀದಿಸಿದ್ದು ಎಂದು ಕಾಣಿಸಲಾಗಿದೆ. ಸದರಿ ದಾಖಲೆಯನ್ನು ಸಾಕ್ಷಿ ಗುರುತಿಸಿದ ಕಾರಣ ಅದನ್ನು ನಿಡಿ-6 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯಲ್ಲಿ ಸ್ವತ್ತನ್ನು ಖರೀದಿಸಿದ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಎಂ ವಿ ರೇಗೆ, ಮೋಟರ ಓನರ್ ರವರು ರೂ 2,625/- ಹಣವನ್ನು ಟ್ರೆಸರಿಗೆ ಡೆಪಾಸಿಟ್ ಮಾಡಿರುವುದು ಕಂಡಬರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ಗುರುತಿಸಿದ ಕಾರಣ ಅದನ್ನು ನಿಡಿ-7 ಎಂದು ಗುರುತಿಸಲಾಯಿತು. ರಾ ರೀತಿ ಮಾಧವರಾರವರು ಅನೆಕ್ಸರ್ ಬಿ ನಲ್ಲಿ ಕಾಣಿಸಿದ ಸಿರಿಯಲ್ ನಂ.1 ಮತ್ತು 3 ರಿಂದ 11 ಸ್ವತ್ತುಗಳನ್ನು ಅವರು ಜೀವಿತ ಕಾಲದಲ್ಲಿ ಖರೀದಿಸಿದ್ದರು ಎಂದು ಹೇಳುವುದು ಸರಿಯಲ್ಲ. ಸದರಿ ಸಂಗತಿಗಳನ್ನು ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ಅನೆಕ್ಸರ್ ಬಿ ನಲ್ಲಿ ಕಾಣಿಸಿದ ಸಿರಿಯಲ್ ನಂ.1 ಮತ್ತು 3 ರಿಂದ 11 ಸ್ವತ್ತುಗಳು ಮಾಧವರಾವರವರ ಸ್ವಯಾರ್ಜಿತ ಸ್ವತ್ತುಗಳು ಎಂದು ಹೇಳುವುದು ಸರಿಯಲ್ಲ. 1947 ರಲ್ಲಿ ಮಾಧವರಾವರವರು ತೀರಿಹೋದ ನಂತರ ಅವರ ಹೆಂಡತಿ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಅವರ

ಹತ್ತಿರದ ಸಂಬಂಧಿಗಳು ಇಲ್ಲದ ಕಾರಣ ಅವರನ್ನು ಶಂಕರರಾವರವರು ನೋಡಿಕೊಳ್ಳುತ್ತಿದ್ದರು. ಮಾಧವರಾವರವರ ಹೆಂಡತಿ ಲಕ್ಷ್ಮೀಬಾಯಿ ರೇಗೆರವರ ಪರವಾನಿಗೆಯ ಮೇರೆಗೆ ಶಂಕರರಾವರವರು ಮಾಧವರಾವರವರು ಸಂಪಾದಿಸಿದ ಎಲ್ಲ ಸ್ವತ್ತುಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು ಎಂದು ಹೇಳುವುದು ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾಹಾಗೂ ಸಿಜೆಎಂ,
ಧಾರವಾಡ.